ಈ ಕೆಲಸಮಾಡುತ್ತಿದ್ದಾರೆ. ಇದರಿಂದಾಗಿ ಕೋಟ್ಯಾಂತರ ರೂಪಾಯಿ ಬೆಲೆಯ ಕಲ್ಲಿದ್ದಲು ಹೊರಗಡೆ ಹೋಗುತ್ತಿದೆ. ಇದರ ಬಗ್ಗೆ ತಾವು ಏನು ಹೇಳುತ್ತಿದ್ದೀರಿ?

ಶ್ರೀ ಎಸ್. ಬಂಗಾರಪ್ಪ : ಲೇಮ್ ಬಗ್ಗೆ ಟೆಂಡರ್ ಇವೆ. ಕೋಲ್ ಬಗ್ಗೆ ಟೆಂಡರ್ಸ್ ಇಲ್ಲ ಎಂಬುವುದು ನನಗೆ ಗೊತ್ತಾಗುತ್ತಿದೆ.

ಶ್ರೀ ಸಿ. ಬೈರೇಗೌಡ : ನಾನು ಕೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ : ನೀವು ಕೇಳಿದ್ದೀರಿ. ಆದುದರಿಂದಲೇ ನಾನು ಉತ್ತರ ಕೊಡುತ್ತಿದ್ದೇನೆ. I am not refuting your matter.

ಕೋಲ್ ಮೂವ್‌ಮೆಂಟ್ ಏನಿದೆ ಅದು ಬೇರೆ, ಆಮೇಲೆ ಬರ್ನ್ಟ್ ಲೈಮ್ ಏನಿದೆ ಇದು ಬೇರೆ. For burnt lime tenders were called but not for coal. ಕೋಲ್‌ಗೆ ನೆಗೋಸಿಯೇಷನ್ ಎಂದು ಮಾಡಿದ್ದಾರೆ. ಆಫೀಸರ್ಸ್ ಕಮಿಟಿ ಮತ್ತೊಂದು ಎಂದು ಮಾಡಿಕೊಂಡಿದ್ದಾರೆ. I would like to know why the tenders are not called for coal movement. ನಿಮ್ಮ ಅಭಿಪ್ರಾಯವನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದುದರಿಂದಲೇ ನಾನು ಇದನ್ನು ಎನ್‌ಕ್ವೈರಿ ಮಾಡುತ್ತೇನೆಂದು ಹೇಳಿದ್ದೇನೆ. ಅದರ ವರದಿಯನ್ನು ತಮಗೆ ಕಳುಹಿಸಿಕೊಡುತ್ತೇನೆ.

ಶ್ರೀ ಸಿ. ಬೈರೇಗೌಡ : ಕಲ್ಲಿದ್ದಲು ಸಿಂಡರ್‌ನಲ್ಲಿ ಹೋಗುತ್ತಿದೆ. ಕಲ್ಲಿದ್ದಲನ್ನು ಸರಿಯಾಗಿ ಬಾಯ್ಲರ್‌ಗೆ ಫೀಡ್ ಮಾಡದೆ ಎಷ್ಟು ಶಾಖ ಅದರಿಂದ ಉತ್ಪತ್ತಿಯಾಗಬೇಕೋ ಅಷ್ಟು ಆಗುತ್ತಿಲ್ಲ ಅದು ಪೂರ್ಣವಾಗಿ ಬಳಕೆ ಆಗುತ್ತಿಲ್ಲ. ಅದು ಸಿಂಡರ್ಸ್‌ನಲ್ಲಿ ಹೋಗುತ್ತಿದೆ. ಇದರಿಂದಾಗಿ ಕೋಟ್ಯಾಂತರ ರೂಪಾಯಿ ನಷ್ಟವಾಗುತ್ತಿದೆ.

ಅಧ್ಯಕ್ಷರು : ಇದನ್ನೂ ಕೂಡ ಸೇರಿಸಿ ಎನ್‌ಕ್ವೈರಿ ಮಾಡಿಸುತ್ತೀರಾ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ.

ಶ್ರೀ ಎಸ್.ಬಂಗಾರಪ್ಪ : ಅದನ್ನೂ ಕೂಡ ಸೇರಿಸುತ್ತೇನೆ.

12-05 ಪಿ.ಎಂ

ಶರಾವತಿ ನದಿಗೆ ಅಡ್ಡಲಾಗಿ ಸೇತುವೆಯ ನಿರ್ಮಾಣ

931 - ಶ್ರೀ ಆರ್.ಎನ್. ನಾಯಕ್ (ಭಟ್ಕಳ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಹೊನ್ನಾವರ ರಾಷ್ಟ್ರೀಯ ಹೆದ್ದಾರಿ ಮೇಲೆ ಶರಾವತಿ ನದಿಗೆ ನಿರ್ಮಿಸಿರುವ ಸೇತುವೆ ಎಷ್ಟು ಕಂಬಗಳಿಂದ ನಿರ್ಮಿಸಲ್ಪಟ್ಟಿದೆ.

2) ಪ್ರತಿ ಎರಡು ಕಂಬಗಳ ಮಧ್ಯೆ ನೀರು ಹರಿದು ಹೋಗಲು ಎಷ್ಟು ಅಂತರ ನೀಡಲಾಗಿದೆ?

3) ಹೊನ್ನಾವರದಿಂದ ಪ್ರಾರಂಭಿಸಿ ಎಷ್ಟರಿಂದ ಎಷ್ಟನೇ ಕಂಬಗಳ ಮಧ್ಯದಲ್ಲಿ ಈ ಸೇತುವೆ ಶಿಥಿಲಗೊಂಡಿದೆ.

4) ಶಿಥಿಲಗೊಂಡ ಭಾಗವನ್ನು ಎಷ್ಟು ಜನ ಪರಿಣಿತರು ಪರೀಕ್ಷಿಸಿದ್ದಾರೆ ಮತ್ತು ಯಾರ್ಯಾರು ಎಂದು ಪರೀಕ್ಷಿಸಿದರು?

5) ಇಂಧ ಪರಿಣಿತರಿಂದ ಪರೀಕ್ಷಿಸಲು ಈ ತನಕ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ?

6) ಪರಿಣಿತರು ನಿಖರವಾದ ಅಭಿಪ್ರಾಯ ಏನೆಂದು ಗೊತ್ತಾಗಿದೆಯೇ?

7) ಸದ್ಯ ಸೇತುವೆಯನ್ನು ನೋಡಿಕೊಳ್ಳುವ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಇವರು ಸಿವಿಲ್ ಇಂಜಿನಿಯರಿಂಗ್ ಪದವೀಧರರೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು.)

1) ಈ ಸೇತುವೆಯನ್ನು 33 ಆಧಾರ (ಪಿಯರ್‌ಗಳು) ಕಂಬಗಳು ಹಾಗೂ 2 ಅಬಟಿಮೆಂಟ್‌ಗಳಿಂದ ನಿರ್ಮಿಸಲ್ಪಟ್ಟಿದೆ.

2) 30 ಮೀಟರ್‌ಗಳು.

3) ಹೊನ್ನಾವರದಿಂದ ಪ್ರಾರಂಬಿಸಿ ಒಂದನೇ ಸ್ಪ್ಯಾನ್‌ನಲ್ಲಿ ಐದು ಗರ್ಡ್‌ರ್‌ಗಳ ಪೈಕಿ ಎರಡು ಗರ್ಡರ್‌ಗಳಲ್ಲಿ ಬಿರುಕು ಕಾಣಿಸಿದೆ.

4) ಕೇಂದ್ರ ,ಸಾರಿಗೆ ಸಚಿವಾಲಯದ ಇಂಜಿನಿಯರ್‌ಗಳು ಮತ್ತು ರಾಷ್ಟ್ರೀಯ ಹೆದ್ದಾರಿ ವಲಯದ ಇಂಜಿನಿಯರ್‌ಗಳು ಅಲ್ಲದೆ ಆರು ಪರಿಣಿತರು ಸಲಹೆಗಾರರು ಮೇ.89 ಜನವರಿ -ಫೆಬ್ರವರಿ 91ರಲ್ಲಿ ಪರೀಕ್ಷಿಸಿದ್ದಾರೆ.

5) ಕೇಂದ್ರ ಸಾರಿಗೆ ಸಚಿವಾಲಯದ ಸಲಹೆಯಂತೆ ಸೆಂಟ್ರಲ್ ಎಲೆಕ್ಟ್ರೋಕೆಮಿಕಲ್ ರೀಸರ್ಚ್ ಇನ್ಸ್ಟಿಟ್ಯೂಷನ್. ಕಾರೈಕುಡಿ ಸಂಸ್ಥೆಗೆ ಈ ಸೇತುವೆಯನ್ನು ಪರೀಕ್ಷಿಸಿ ಸೇತುವೆಯ ದುರಸ್ಥಿಗೆ ಸಲಹೆ ಸಲ್ಲಿಸಲು ಕೇಳಲಾಯಿತು. ಈ ಕೆಲಸಕ್ಕೆ ಕೇಂದ್ರ ಸರ್ಕಾರದವರು ರೂ. 2.37 ಲಕ್ಷ ರೂ.ಗಳನ್ನು ಮಂಜೂರು ಮಾಡಿದ್ದಾರೆ.

6) ಗೊತ್ತಾಗಿಲ್ಲ.

7) -ಅಲ್ಲ-

ಶ್ರೀ ಆರ್.ಎನ್. ನಾಯಕ್ : ಮಾನ್ಯ ಅಧ್ಯಕ್ಷರೆ, ನನ್ನ 6ನೇ ಉಪ ಪ್ರಶ್ನೆಯಲ್ಲಿ ಪರಿಣಿತರ ನಿಖರವಾದ ಅಭಿಪ್ರಾಯವೇನೆಂದು ಗೊತ್ತಾಗಿದೆಯೆ ಎಂದು ಕೇಳಿದ್ದಕ್ಕೆ ಗೊತ್ತಾಗಿಲ್ಲವೆಂದು ಹೇಳಿದ್ದಾರೆ. ಈಗಾಗಲೆ ಸಾಕಷ್ಟು ಪರಿಣಿತರು ಈ ಹೊನ್ನಾವರ ಸೇತುವೆಯು ಮುರಿದು ಬಿದ್ದು ಹೋಗುತ್ತದೊ ಇಲ್ಲವೋ ಎನ್ನುವ ಬಗ್ಗೆ ಪರೀಕ್ಷೆ ಮಾಡಿದರೂ ಸಹ ಇನ್ನೂ ಏನೂ ಅವರಿಗೆ ಗೊತ್ತಾಗಿಲ್ಲ. ಈಗ 7ನೇ ತಾರೀಖಿನಿಂದ ಭಾರಿ ವಾಹನಗಳು ಆ ಸೇತುವೆಯ ಮೇಲೆ ಓಡಾಡುವುದನ್ನು ನಿಲ್ಲಿಸಿದ್ದಾರೆ, ಬಸ್‌ನಲ್ಲಿ ಕುಳಿತಿರುವವರು ಕೆಳಗೆ ಇಳಿದು ಆ ಕಡೆ ಹೋಗಿ ಆ ನಂತರ ಬಸ್ ಹತ್ತಿ ಹೋಗಬೇಕಾಗಿದೆ. ಇದರಿಂದ ಕರಾವಳಿಯ ಜನರಿಗೆ ಬಹಳ ಕಷ್ಟವಾಗುತ್ತಿದೆ. ಇಲ್ಲಿ 30 ಮೀಟರ್ ಆಗಲದ 34 ಸ್ಥಳಗಳಿಂದ ನೀರು ಸಮುದ್ರಕ್ಕೆ ಹೊರಟುಹೋಗುತ್ತದೆ. ಹೊನ್ನಾವರದ ಕಡೆಯಿಂದ ಭೂಮಿಯಿಂದ ಪ್ರಥಮ ಕಂಬಕ್ಕೆ 30 ಮೀಟರ್ ಅಂತರದಿಂದ ನೀರು ಹೋಗುವ ದಾರಿ ಇದೆ, ಆ ದಾರಿಯಯ ಮೇಲ್ಭಾಗದಲ್ಲಿ ಗರ್‌ಡಲ್ಸ್ ಹೋಗಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಆದುದರಿಂದ ಪರಿಣಿತರ ಅಭಿಪ್ರಾಯವನ್ನು ಬದಿಗಿಡಿ, ಅದು ನಿಧಾನವಾಗಿ ಯಾವಾಗಲಾದರೂ ಬರಲಿ. ಮೊದಲು ಆ ಪ್ರಥಮ ನೀರು ಹೋಗುವ ದಾರಿಯನ್ನು ಮುಚ್ಚಿದರೆ ಆ ಸೇತುವೆಯ ಮೇಲೆ ಭಾರಿ ವಾಹನಗಳು ಓಡಾಡಲು ಸಾಧ್ಯವೆ ಎನ್ನುವ ಬಗ್ಗೆ ನನಗೆ ಉತ್ತರ ಬೇಕಾಗಿದೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ಈ ಸೇತುವೆಯನ್ನು 1971ರಲ್ಲಿ ಕಟ್ಟಿ ಆದ ಮೇಲೆ ಇತ್ತೀಚೆಗೆ ಗರ್‌ಡಲ್ಸ್‌ನಲ್ಲಿ ಬಿರುಕು ಬಿಟ್ಟಿರುವುದಾಗಿ ತಿಳಿದುಬಂದಿದೆ. ಆದಾದಮೇಲೆ ಇದನ್ನು ಸರಿಯಾಗಿ ನೋಡಿ ತಿಳಿಸಬೇಕೆಂದು Central Elctro-Chemical Research Institute,Faraikudi,ಗೆ ವಹಿಸಿದೆವು, ಅದಕೋಸ್ಕರ 2.37 ಲಕ್ಷ ರೂಪಾಯಿಯನ್ನು ಸಹ ಮಂಜೂರು ಮಾಡಿದ್ದಾರೆ ಅವರ ಅಭಿಪ್ರಾಯವನ್ನು ಕೂಡ ನಾವು ಕಾಯುತ್ತಿದ್ದೇವೆ, ಈ ಮಧ್ಯೆ Three qualified contractors with foreign collabration have submitted their report to the Central Government on

25.2.1991.That matter is being examined by the Ministry related to the National Highways, Government of India.

ಅದು ಅಲ್ಲಿಂದ ಬಂದ ಮೇಲೆ ತಿಳಿಸುತ್ತೇವೆ, ಈ ಮಧ್ಯೆ ಏನು ಅವರು ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಿದೆ ಎಂದು ಹೇಳುತ್ತಿದ್ದಾರೆ, ಅದನ್ನು ಪರೀಕ್ಷೆ ಮಾಡಿಸುತ್ತೇನೆ. ಇದರ ಬಗ್ಗೆ ಟೆಕ್ನಿಕಲ್ ಪೀಪಲ್ಸ್ ಹೇಳಬಹುದೇ ವಿನಹ ಆ ರಿಸ್ಕ್ ತೆಗೆದುಕೊಳ್ಳುವುದು ಸರಿಯಲ್ಲ ಎನ್ನುವ ಅಭಿಪ್ರಾಯಕ್ಕೆ ಬರಬೇಕಾಗುತ್ತದೆ. ಹೆವಿ ವೆಹಿಕಲ್ಸ್ ಹೋಗುವುದನ್ನು ಈಗಾಗಲೇ ಡೈವರ್ಟ್ ಮಾಡಿದ್ದಾರೆ. ಭಟ್ಕಳ್, ಜೋಗ್, ಸಿದ್ದಾಪುರ, ಸಿರಸಿ ಹುಬ್ಬಳ್ಳಿಯಲ್ಲಿ ಹೆವಿ ಟ್ರಾಫಿಕ್ ಇದೆ. ಈಗ ನಾವು ಡೈವರ್ಟ್ ಮಾಡತಕ್ಕ ಕಾರ್ಯಕ್ರಮವನ್ನು ಹಾಕಿದ್ದೇವೆ ಈಗ ಭಟ್ಕಳ್ ಮತ್ತು ಜೋಗ್ ರೋಡ್ ಕೂಡ ರಿಸ್ಕ್ ರೋಡ್." ಆದಷ್ಟು ಬೇಗ ಮಾಡಬೇಕೆಂದು ಕೇಂದ್ರಸರ್ಕಾರಕ್ಕೆ ತಿಳಿಸಿದ್ದೇವೆ. Because the matter pertains to the Government of India and is in respect of the national highway.

ಶ್ರೀ ಆರ್.ಎನ್.ನಾಯಕ್: ಈಗಾಗಲೆ ಏನುಮಾಡಿದ್ದಾರೆ, ನಾನು ಹೇಳಿದಂತಹ ಸ್ಥಳದಲ್ಲಿ ಆ ಪ್ರಥಮ ನೀರು ಹೋಗುವಂತಹ ದಾರಿಯನ್ನು ಮುಚ್ಚಿದ್ದಾರೆ ಅರ್ಧಕ್ಕೆ ನೀರು ಹೋಗುವುದನ್ನು ನಿಲ್ಲಿಸಿದ್ದಾರೆ. ಇನ್ನುಮುಂದೆ ಪೂರ್ತಿಯಾಗಿ ನೀರು ಹೋಗುವುದನ್ನು ನಿಲ್ಲಿಸಿದರೆ ಸೇತುವೆಗೆ ಅನುಕೂಲವಾಗುತ್ತದೆ. ಪ್ರಥಮವಾಗಿ ಈ ನೀರು ಹೋಗುವ ದಾರಿಯಲ್ಲಿ ಕೇವಲ ಎರಡು ಗರ್ಡರ್ಸ್‌ನಲ್ಲಿ ಮಾತ್ರ ತೊಂದರೆ ಕಂಡುಬಂದಿತ್ತು, ಉಳಿದ ಭಾಗದಲ್ಲಿ ಯಾವುದೇ ರೀತಿಯ ತೊಂದರೆಗಳು ಬಂದ ಬಗ್ಗೆ ಮಾಹಿತಿಯನ್ನು ಕೊಟ್ಟಿಲ್ಲ. ಆದುದರಿಂದ ಸರ್ಕಾರದವರು ಈ ಅಧಿಕಾರಿಗಳನ್ನು ನಂಬುದರ ಬದಲು ಏನಾದರೂ ಬೇರೆ ಖಾಸಗಿ ಪರಿಣಿತರ ಸಮಿತಿಯನ್ನು ಕಳುಹಿಸಿ ವರದಿಯನ್ನು ತರಿಕೊಂಡರೆ ಸೇತುವೆಗೂ ತೊಂದರೆ ಆಗುವುದಿಲ್ಲ, ನೀರಿಗೂ ತೊಂದರೆಯಾಗುವುದಿಲ್ಲ ಮತ್ತು ಭಾರಿ ವಾಹನಗಳು ಓಡಾಡುವುದಕ್ಕೂ ತೊಂದರೆಯಾಗುವುದಿಲ್ಲ. ತಾವು ಈ ಬಗ್ಗೆ ಪ್ರಯತ್ನ ಮಾಡಬೇಕು. ಮತ್ತೊಂದು ವಿಷಯವೆಂದರೆ, ಅಲ್ಲಿರುವ ಅಸಿಸ್ಟೆಂಟ್ ಎಗ್ಸಿಕ್ಯೂಟೀವ್ ಇಂಜಿನಿಯರ್ ಆಗಿರುವವರು ಮೆಕಾನಿಕಲ್ ಇಂಜಿನಿಯರ್ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಆ ಮನುಷ್ಯನ ಕೈಗೆ ಇದನ್ನು ಕೊಟ್ಟರೆ ಅವನು ಸಿವಿಲ್ ಇಂಜಿನಿಯರ್ ಅಲ್ಲ, ನೆಟ್ಟು ಬೋಲ್ಟ್ ಹಿಡಿಯುವ ಕೈಗೆ ಬ್ಲಿಡ್ಜನ್ನು ಕೊಟ್ಟರೆ ಏನು ಉಪಯೋಗ ಆಗುವುದಿಲ್ಲ ಆದುದರಿಂದ ಆ ಇಂಜಿನಿಯರನ್ನು ಬೇರೆ ಕಡೆ ಹಾಕಿ ಬೇರೆಯವರನ್ನು ಅಲ್ಲಿ ಹಾಕಬೇಕಾಗುತ್ತದೆ. ಅದರ ಬಗ್ಗೆ ಏನಾದರೂ ಆಲೋಚನೆ ಮಾಡಬೇಕು.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ನಾನು ಮತ್ತು ಮಾನ್ಯ ನಾಯಕ್‌ರವರು ಈ ಸಮಸ್ಯೆಯ ಬಗ್ಗೆ ಹಿಂದಿನ ಸಭೆಯಲ್ಲಿ ಎತ್ತಿದ್ದಾಗ, ಮಾನ್ಯ ಶಿಕ್ಷಣ ಸಚಿವರು ಉತ್ತರ ಕೊಡುತ್ತ ಈ ಸೇತುವೆಗೆ ಯಾವುದೇ ತೊಂದರೆ ಇಲ್ಲವೆಂದು ಹೇಳಿದ್ದರು. ಆದರೆ ಈಗ ಸೇತುವೆಯ ಮೇಲೆ ಸಂಚಾರವನ್ನು ಎರಡೂ ಕಡೆಯೂ ಬಂದ್ ಮಾಡಿದ್ದಾರೆ. ಈಗ ಕೊಕೊ ಟೆಲಿವಿಕ್ ಕೆಲಸ ಭಾರಿ ದೊಡ್ಡ ಪ್ರಮಾಣದಲ್ಲಿ ನಡೆಯತ್ತಿದೆ. ಈ ಬ್ರಿಡ್ಜ್ ಕೆಲಸದಿಂದ ಟ್ರಾಫಿಕ್ ಸ್ಟಾಪ್ ಆಗಿ ಇದರ ಮೇಲೆ ಪರಿಣಾಮ ಆಗಿದೆ. ಮಾನ್ಯ ಮಿತ್ರರು ಹೇಳಿದಂತಹ ಒಂದು ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ರಿಸ್ಕ್ ತೆಗೆದುಕೊಳ್ಳದೆ ನಾವು ಯಾವುದನ್ನು ಮಾಡುವುದಕ್ಕಾಗುವುದಿಲ್ಲ. ಆದರೆ ನಾನು ಒಂದು ಸಲಹೆ ಕೊಡುತ್ತಿದ್ದೇನೆ. ಈ ಎನ್‌ಟೈರ್ ಬ್ರಿಡ್ಜ್‌ನಲ್ಲಿ ಕೇವಲ ಯಾರ್ಡ್ ಸ್ಟಾನ್ ಸ್ವಲ್ಪ ವೀಕ್ ಆಗಿದೆ. ಹೊನ್ನಾವರ ಕಡೆಯಿಂದ ಭಟ್ಕಳ್‌ಗೆ ಹೋಗುವಾಗ First two spans have become weak. ಮಾನ್ಯ ಮಿತ್ರರು ಹೇಳಿದ ಹಾಗೆ ಅಲ್ಲಿ ಕಂಬ ನಿಲ್ಲಿಸಿದರೆ ಅದರಿಂದ ಏನು ಮಾಡುವುದಕ್ಕೆ ಸಾಧ್ಯವಿಲ್ಲ, ಆದರೆ

ತಾವು ಆ ಯಾರ್ಡ್ ಸ್ಯಾನ್ ಒಳಗೆ, ಬ್ರಿಡ್ಜ್ ಕೆಳಗೆ ಅರ್ತ್ ವರ್ಕ್ಸ್ ಕಂಪ್ಲೀಟ್ ಮಾಡಿಕೊಂಡು ಡಿಗ್ಗಿಂಗ್ ಮಾಡಿಕೊಂಡರೆ ಯಾವ ತೊಂದರೆ ಇಲ್ಲ ಮತ್ತು ಸರಿಯಾಗಿ ಟ್ರಾಫಿಕ್ ಮಾಡಲಿಕ್ಕೆ ಸಾಧ್ಯವಾಗಬಹುದು ಎಂದು ಕೆಲವು ತಜ್ಞರು ಹಾಗೂ ಅಲ್ಲಿನ ಇಂಜಿನಿಯರ್‌ಗಳು ಸಲಹೆಕೊಟ್ಟರು. ಆ ತಜ್ಞರ ಅಭಿಪ್ರಾಯವನ್ನು ತಾವು ತಮ್ಮ ಇಂಜಿನಿಯರ್ ಮುಖಾಂತರ ಪರಿಶೀಲಿಸಬೇಕೆಂದು ತಮ್ಮಲ್ಲಿ ನಾನು ವಿನಂತಿ ಮಾಡುತ್ತಿದ್ದೇನೆ. ಈಗ ಸಾಧ್ಯವಿಲ್ಲ ಅಂದರೆ ಇವತ್ತು ಏನಾಗುತ್ತದೆ, ಎನ್‌ಟೈರ್ ಟ್ರಾಫಿಕ್ ಜೋಗ್‌ಗೆ ಹೋಗಬೇಕು, ಜೋಗ್‌ನಿಂದ ಪುನಃ ಬಟ್ಕಳ್‌ಗೆ ಬರಬೇಕು. ಭಟ್ಕಳ್‌ನಿಂದ ಜೋಗ್‌ಗೆ ಹೋಗಬೇಕು ಮತ್ತು ಹುಬ್ಬಳ್ಳಿಗೆ ಹೋಗಬೇಕು. ಹೀಗಾದರೆ ಇವತ್ತು ಡೀಸಲ್ ಷಾರ್ಟೇಜ್ ಇದೆ, ಇದೊಂದು ಸಮಸ್ಯೆ ಇದೆ. ಇಂತಹ ಪರಿಸ್ಥಿತಿಯಲ್ಲಿ ಸಾಕಷ್ಟು ಪರಿಣಾಮ ಜನರ ಮೇಲಾಗುತ್ತದೆ. ಅದರ ಮತ್ತೊಂದು ದಾರಿ ಇದೆ. ವಯಾ ತಲಕೋಡ್ ಏಳು ಬಿಡ್ಜ್‌ಗಳನ್ನು ತಾವು ಮಂಜೂರು ಮಾಡಿದ್ದೀರಿ. ಅದರಲ್ಲಿ ಈಗಾಗಲೇ 4-5 ಬ್ರಿಡ್ಜ್‌ಗಳು ಮುಗಿದಿದೆ. one or two ಕಂಪ್ಲೀಟಾಗುತ್ತಿದೆ. The work is under progress.

ಅದು ಜಿಲ್ಲಾ ಪರಿಷತ್ ಮುಖಾಂತರ ಆಗಬೇಕು ತಾವು ಅಲ್ಲಿ ಸ್ವಲ್ಪ ಒತ್ತಾಯ ಮಾಡಿದರೆ ಆ ಕೆಲಸ ಲಘು ಆಗುತ್ತದೆ ಆದುದರಿಂದ ನಾನು ಕೊಟ್ಟ ಈ ಎರಡು ಸಲಹೆಗಳನ್ನು ತಾವು ಪರಿಶೀಲಿಸಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ಆರ್.ಎನ್. ನಾಯಕ್‌ರವರ ಪ್ರಶ್ನೆ ಮತ್ತು ಮಾನ್ಯ ಸದಸ್ಯರಾದ ಶ್ರೀ ಆರ್.ವಿ. ದೇಶಪಾಂಡೆಯವರ ಪ್ರಶ್ನೆ ಒಂದೇ ರೀತಿಯಾಗಿದೆ. ಎರಡನೆಯ ಪ್ರಶ್ನೆ ಆರ್.ಎನ್. ನಾಯಕರದ್ದು ಏನೆಂದರೆ ಅಲ್ಲಿನ ಮೆಕ್ಯಾನಿಕಲ್ ಇಂಜಿನಿಯರುಗಳು ಇತ್ಯಾದಿ ಬೇರೆಯವರನ್ನು ಹಾಕಿದ್ದೇವೆ ಎನ್ನುವ ವಿಚಾರ ಇದೆ, ಅವರು ಬೇರೆ ಕೆಲಸವನ್ನು ಮಾಡುತ್ತಿಲ್ಲ. ಅವರನ್ನು ಸುಮ್ಮನೆ ನೋಡಿಕೊಳ್ಳುವುದಕೋಸ್ಕರ ಹಾಕಿದ್ದೇವೆ. ಅವನೇನು ದೊಡ್ಡ ಸೇತುವೆ ರಿಪೇರಿ ಮಾಡುವವ ಅಲ್ಲ. ಒಟ್ಟಿನಲ್ಲಿ ಅಲ್ಲಿ ಒಬ್ಬ ಇಂಜಿನಿಯರ್ ಇರಬೇಕು. ಎಂದು ಇಂಜಿನಿಯರನ್ನು ನೇಮಿಸಿರುವುದು. ಆದ್ದರಿಂದ ಆ ಪ್ರಶ್ನೆಯನ್ನು ಸೀರಿಯಸ್ಸಾಗಿ ತೆಗೆದುಕೊಳ್ಳುವ ಅವಶ್ಯಕತೆ ಇಲ್ಲ. ಆದರೆ ತಜ್ಞರಲ್ಲಿ ಕೇಳಿಕೊಂಡು ಇದನ್ನು ಅರ್ಜೆಂಟ್ ನೋಡುವುದಕ್ಕೆ ಸಾಧ್ಯವೇ ಎಂದು ಹೇಳಿದ್ದಿರಿ ಇವೆಲ್ಲವೂ ಕೂಡ they are under Examination , ಈ ರಿಪೋರ್ಟ್ ಕೂಡ ಸೆಂಟ್ರಲ್ ಗೌರ್ಮೆಂಟ್‌ಗೆ ಈಗಾಗಲೇ ಹೋಗಿ ಬಿಟ್ಟಿದೆ. ಇದು ಎನ್‌ಟೈರ್ ಎಕಾನಮಿ ಹಾಳುಮಾಡತಕ್ಕಂಥದ್ದು ಇದರಿಂದ ಕೋಸ್ಟಲ್ ಹೈವೇ ಕಂಪ್ಲೀಟ್ ನಿಂತುಹೋಗುತ್ತದೆ, ಸುಮಾರಾಗಿ ನನಗೆ ಗೊತ್ತಿರುವಂತೆ, ನನ್ನ ಗಮನದಲ್ಲಿ ಬಂದಿರತಕ್ಕಂತದ್ದು ಗೋವಾದಲ್ಲಿ ಇರತಕ್ಕಂತದ್ದು ಮಾಂಡವಿ ಸೇತುವೆ.

ಶ್ರೀ ಆರ್.ವಿ. ದೇಶಪಾಂಡೆ : ಮಾಂಡವಿಗ್ ಯಾರು ಕಂಟ್ರಾಕ್ಟರ್ ಇದ್ದರಲ್ಲ, ಆ ಬ್ರಿಡ್ಜ್ ಬಿತ್ತಲ್ಲಾ, ಅದೇ ಕಂಟ್ರಾಕ್ಟರ್ ಇದಕ್ಕೂ ಇದ್ದಾರೆ, The man, the contractor has constructed the Mandovi, ಕೊಲ್ಯಾಪ್ಸ್ ಆಯಿತಲ್ಲ the same contractor has contructed this.

ಅಧ್ಯಕ್ಷರು : ಅವನು ಸ್ಪೆಷಲೈಸ್ ಮಾಡಿಕೊಳ್ಳುತ್ತಾ ಇರಬೇಕು.

ಶ್ರೀ ಎಸ್. ಬಂಗಾರಪ್ಪ : ಅಲ್ಲೊಂದು ಮಾಂಡವಿ ಸೇತುವೆ ಕುಸಿದು ಬಿದ್ದಿತು. ಅವರು ಎಲ್ಲೆಲ್ಲಿ ಕಟ್ಟಿದ್ದಾರೆ ಎನ್ನುವುದು ನೋಡಿ ಅದರ ಬಗ್ಗೆ ಸ್ವಲ್ಪ ಗಮನ ಕೊಡುವುದು ಒಳ್ಳೆಯದು ಎಂದು ನಾನು ಅಭಿಪ್ರಾಯ ಇಟ್ಟುಕೊಂಡಿದ್ದೇನೆ. ಆಮೇಲೆ ಇದರ ಬಗ್ಗೆ ರಿಪೋರ್ಟ್ ಹೋಗಿದೆಯಲ್ಲ, we have been in close touch with

the Government of India. ನಾವು ಹಾಗೆಯೇ ಕುಳಿತುಕೊಂಡಿಲ್ಲ. ಸೇತುವೆಯನ್ನು ದುರಸ್ತಿ ಮಾಡುವ ಮತ್ತು ಬಲಪಡಿಸುವ ಕೆಲಸವನ್ನು ಬಹಳ ಜಾಗ್ರತೆ ತೆಗೆದುಕೊಳ್ಳಬೇಕಾಗಿದೆ. ಏಕೆಂದರೆ, ಕೇಂದ್ರ ಸರ್ಕಾರದವರೂ ಕೂಡ ಸೀರಿಯಸ್ಸಾಗಿದ್ದಾರೆ. ನಾವು ತಕ್ಷಣ ಮಾಡುತ್ತೇವೆ. ಎಲ್ಲಾದರೂ ವ್ಯತ್ಯಾಸ ಆಗಿಬಿಟ್ಟರೆ ಮತ್ತೆ ತಾವು ಹಾಗೆ ಅಪಾಯವಾಗಬಾರದು ಎನ್ನುವ ದೃಷ್ಟಿಯಿಂದ ಮಾಡುತ್ತಿದ್ದೇವೆ. ಅಂತಿಮ ನಿರ್ಧಾರವನ್ನು ಕೇಂದ್ರ ಸರ್ಕಾರ ತೆಗೆದುಕೊಳ್ಳಲಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎಂ. ವೀರಪ್ಪ ಮೊಯಿಲಿ : (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ದಿನಾಂಕ : 12-3-1991ರ ಮೂಲಕ ಉತ್ತರಿಸುವ 7ನೇ ಪಟ್ಟಿಯಲ್ಲಿರುವ 161 ಪ್ರಶ್ನೆಗಳ ಪೈಕಿ 115 ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಸವಣೂರು - ಶೇರವಾಡ - ಹರವಿ ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸುವ ಬಗ್ಗೆ

1056 - ಶ್ರೀ ಮಂಜುನಾಥ ಸಿ. ಕುನ್ನೂರ್ (ಶಿಗ್ಗಾಂವ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸವಣೂರ-ಶೇರವಾಡ ಹಾಗೂ ಸವಣೂರು-ಹರವಿ ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸುವ ವಿಚಾರ ಸರ್ಕಾರದವರ ಪರಿಶೀಲನೆಯಲ್ಲಿ ಇದೆಯೇ?*

ಆ) *ಹಾಗಿದ್ದಲ್ಲಿ ಇನ್ನು ಎಷ್ಟು ದಿವಸಗಳಲ್ಲಿ ಈ ಕೆಲಸ ಪ್ರಾರಂಭ ಮಾಡಲಾಗುವುದು?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು.)

ಅ) ಇದೆ.

ಆ) ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುವ ಕೆಲವು ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಳ್ಳುವ ಪ್ರಸ್ತಾವನೆಯು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದ್ದು ತೀರ್ಮಾನವಾದ ನಂತರ ಅಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗುವುದು.

ಶಿಗ್ಗಾಂವ ತಾಲ್ಲೂಕಿನ ಎ.ಸಿ.ಟಿ.ಓ. ಕಛೇರಿಯ ಬಗ್ಗೆ.

1055 - ಶ್ರೀ ಮಂಜುನಾಥ ಚೆನ್ನಪ್ಪ ಕುನ್ನೂರ (ಶಿಗ್ಗಾಂವ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಧಾರವಾಡ ಜಿಲ್ಲಾ ಶಿಗ್ಗಾಂವ ತಾಲ್ಲೂಕಿನಲ್ಲಿ ಸಹಾಯಕ ವಾಣಿಜ್ಯ ತೆರಿಗೆ ಅಧಿಕಾರಿಗಳ ಕಛೇರಿಯನ್ನು ತೆರೆಯಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಎಷ್ಟು ದಿನಗಳಲ್ಲಿ ಈ ಕಛೇರಿಯನ್ನು ಪ್ರಾರಂಭಿಸಲಾಗುವುದು?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) ;

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.